

ಡಾ.ವಿನೋದ ಛೆಬ್ಬಿ

ಭದ್ರತೆ ಹಾಗೂ ರೋಚಕತೆ ಎರಡನ್ನೂ ಅಳವಡಿಸಿಕೊಳ್ಳುವ ಸಾಮರ್ಥ್ಯ ದಾಂಪತ್ಯಕ್ಕೆ ಇದೆಯೆ?

# 140: ಪರಸಂಬಂಧಗಳು-3

ಪರಸಂಬಂಧದ ಬಗೆಗೆ ಮಾತಾಡುತ್ತಿದ್ದೇವೆ. ಪರಸಂಬಂಧದ ಬಗೆಗೆ ನಮ್ಮ ಸಮಾಜವು ಹೇಗೆ ಸ್ಪಂದಿಸುತ್ತದೆ ಎಂಬುದನ್ನು ನೋಡೋಣ. ಅದಕ್ಕಾಗಿ ಸಾಮಾಜಿಕ ಇತಿಹಾಸವನ್ನೂ ಸ್ವಲ್ಪ ಕೆದಕೋಣ.

ಪರಸಂಬಂಧದ ಇತಿಹಾಸವು ದಾಂಪತ್ಯದ ಇತಿಹಾಸದಷ್ಟೇ ಹಳೆಯದು. ದಾಂಪತ್ಯ ವ್ಯವಸ್ಥೆ ಎನ್ನುವುದು ಹುಟ್ಟಿದಾಗ ಅದಕ್ಕೆ ಪ್ರತಿಯಾಗಿಯೋ ಎಂಬಂತೆ ಪರಸಂಬಂಧವೂ ಹುಟ್ಟಿತು. ಇದಕ್ಕೆ ಸಾಕ್ಷ್ಯ ನಮ್ಮ ಪುರಾಣಗಳಲ್ಲಿದೆ. ನಮ್ಮ ದೇವತೆಗಳನ್ನು ದಂಪತಿಗಳನ್ನಾಗಿ ಮಾಡಿ ಕೂಡಿಸಿದ್ದೇವೆ. (ಉದಾ. ಇಂದ್ರ-ಶಚಿ, ವಿಷ್ಣು-ಲಕ್ಷ್ಮಿ) ಜೊತೆಜೊತೆಗೇ ಪರಸಂಬಂಧವನ್ನೂ ಸೇರಿಸಿದ್ದೇವೆ (ಇಂದ್ರನು ಶಚಿ ಹಾಗೂ ಹಲವು ಅಪ್ಸರೆಯರಿದ್ದೂ ಋಷಿಪತ್ನಿ ಅಹಲ್ಯೆಯನ್ನು ಮೋಸದಿಂದ ಕೂಡುತ್ತಾನೆ. ವೆಂಕಟೇಶನು ಲಕ್ಷ್ಮಿಯಂಥ ಹೆಂಡತಿ ಇದ್ದರೂ ಜಗಳವಾಡಿ ದೂರವಾಗಿ ಪದ್ಮಾವತಿಯನ್ನು ಮೋಹಿಸಿ ಮದುವೆಯಾಗುತ್ತಾನೆ. ಐವರು ಗಂಡಂದಿರಿದ್ದೂ ದ್ರೌಪದಿ ಕರ್ಣನನ್ನು ಬಯಸುತ್ತಾಳೆ.) ಇದೆಲ್ಲ ಏನು ತೋರಿಸುತ್ತವೆ? ಪ್ರೀತಿ-ಪ್ರೇಮ, ಪ್ರಣಯ-ಕಾಮ, ಬಯಕೆ-ನಿರೀಕ್ಷೆ, ರೋಚಕತೆ-ತೃಪ್ತಿ, ಮಿಲನ-ವಿರಹ ಇವುಗಳು ದಾಂಪತ್ಯದ ಗಡಿ ಮೀರುತ್ತವೆ. ಹಾಗಾಗಿ ಪರಸಂಬಂಧವೆಂದರೆ ಹಲವು ಸ್ತರಗಳಿರುವ ಸಂಕೀರ್ಣವಾದ ಅನುಭವಗಳನ್ನು ಕೂಡಿಟ್ಟ ಮನೋಗರ್ಭದೊಳಗೆ ಇಣುಕಿ ನೋಡಲು ನೆರವಾಗುವ ಒಂದು ಕಿಟಿಕಿಯಷ್ಟೆ.

ಹೋದಸಲ ಎಸ್ತೆರ್ ಪೆರೆಲ್ ಬಗೆಗೆ ಮಾತಾಡುತ್ತಿದ್ದೆ. ಕಳೆದ ತಿಂಗಳು 'ಸೈಕಾಲಜಿ ಟುಡೇ' ಎನ್ನುವ ಪತ್ರಿಕೆಗೆ ಈಕೆ ಸಂದರ್ಶನ ಕೊಟ್ಟಿದ್ದಾಳೆ (https://www.psychologytoday.com/blog/ethical-wisdom/201710/the-state-affairs). ಅದು ನಮಗೂ ಎಷ್ಟು ಪ್ರಸ್ತುತವಾಗಿದೆ ಎಂದರೆ ಅದನ್ನೇ ನಮಗೆ ಅನ್ವಯವಾಗುವಂತೆ ಕನ್ನಡೀಕರಿಸಿ ನಿಮ್ಮ ಮುಂದಿಡುತ್ತಿದ್ದೇನೆ.

ಪರಸಂಬಂಧಕ್ಕೆ ಸಂಬಂಧಿಸಿದಂತೆ ನಮ್ಮ ಸಮಾಜದಲ್ಲಿ ಕೆಲವು ನಂಬಿಕೆಗಳಿವೆ: ನಿಮಗೆ ಬೇಕಾದುದೆಲ್ಲ ನಿಮ್ಮ ಮನೆಯಲ್ಲಿ ಸಿಗುತ್ತಿದ್ದರೆ ನೀವು ಹೊರಗಿನಿಂದ ಪಡೆಯುವ ಕಾರಣವಿಲ್ಲ.

ಪರಸಂಬಂಧವು ದೋಷಪೂರಿತ ಸಂಬಂಧದ ಲಕ್ಷಣ; ಅದಲ್ಲದಿದ್ದರೆ ಅದು ದೋಷಪೂರಿತ ವ್ಯಕ್ತಿಯ ಲಕ್ಷಣ.

ಪರಸಂಬಂಧಕ್ಕೆ ಕೈಹಾಕುವವರು ಅಪ್ರಬುದ್ಧರು, ಸ್ವಾರ್ಥಿಗಳು, ಅಹಂಕಾರಿಗಳು, ಪ್ರೀತಿಯಿಂದ ವಂಚಿತರಾದವರು, ವಿಕೃತ ಮನಸ್ಸಿನವರು, ದಾಂಪತ್ಯ ದ್ರೋಹಿಗಳು ಆಗಿರುತ್ತಾರೆ. ಹಾಗೆಯೇ, ಪರಸಂಬಂಧಕ್ಕೆ ಕೈಹಾಕದಿರುವವರು ಸಂಬಂಧಕ್ಕೆ ಬದ್ಧರು, ಗಟ್ಟಿಮನಸ್ಸಿನವರು, ನಿಸ್ವಾರ್ಥಿಗಳು ಆಗಿರುತ್ತಾರೆ.

ಪರಸಂಬಂಧ ಇಲ್ಲದ ದಾಂಪತ್ಯಗಳೆಲ್ಲವೂ ಪವಿತ್ರವಾಗಿರುತ್ತದೆ. ಅದು ಪ್ರವೇಶ ಮಾಡಿದ ದಾಂಪತ್ಯವು ಅಪವಿತ್ರವಾಗುತ್ತದೆ.

ಪರಸಂಬಂಧ ಹೊಕ್ಕ ದಾಂಪತ್ಯವು ಒಡೆದ ಕನ್ನಡಿಯಂತೆ –ಮತ್ತೆ ಜೋಡಿಸಲಾಗುವುದಿಲ್ಲ.

'ಒಂದು ಸಲ ಮೋಸ ಮಾಡಿದವರು ಯಾವೊತ್ತೂ ಮೋಸ ಮಾಡುವವರಾಗುತ್ತಾರೆ'.

ಇಲ್ಲೇನು ಕಾಣುತ್ತದೆ? ಈ ಹೇಳಿಕೆಗಳು ಪರಸಂಬಂಧದ ಹಾಜರಿಯನ್ನು ಆಧರಿಸಿ, ಇದು ದೋಷ ಅಥವಾ ಇದು ದೋಷವಲ್ಲ ಎಂದು ವರ್ಗೀಕರಣ ಮಾಡಿದಂತಿದೆ. ಅಂದರೆ, ಪರಸಂಬಂಧವೆನ್ನುವುದು ಒಂದು ರೋಗ, ಅಲ್ಲದಿರುವ ದಾಂಪತ್ಯವು ಶ್ರೇಷ್ಠ ಎಂದಂತಾಯಿತು. ಆದರೆ ಪರಸಂಬಂಧ ಇಲ್ಲದ ದಾಂಪತ್ಯವು ರೋಗವಿಲ್ಲದ್ದು ಎನ್ನಬಹುದೇ ಹೊರತು ಆರೋಗ್ಯಕರ ಎನ್ನುವಂತಿಲ್ಲ! ಇದಕ್ಕೆ ಪೂರಕವಾಗಿ ಇನ್ನೊಂದು ಸಂಗತಿ ಏನೆಂದರೆ, ಬದ್ಧಸಂಬಂಧದ ಎಲ್ಲ ದ್ರೋಹಗಳ ಪೈಕಿ (ಸುಳ್ಳು ಹೇಳುವುದು, ಅಪ್ರಾಮಾಣಿಕ ಆಗಿರುವುದು, ವಂಚಿಸುವುದು, ಹಿಂಸಿಸುವುದು, ಸ್ವಾರ್ಥಿಯಾಗಿರುವುದು ಇತ್ಯಾದಿ) ಪರಸಂಬಂಧವು ತುತ್ತತುದಿಯಲ್ಲಿ ಇದೆ. 'ನನ್ನ ಗಂಡ ಕೆಲಸಕ್ಕೆ ಹೋಗುವುದಿಲ್ಲ, ಮನೆಯ ಜವಾಬ್ದಾರಿ ಹೊರುವುದಿಲ್ಲ. ನನ್ನ ಅಭಿಪ್ರಾಯಗಳನ್ನು ನಿರ್ಲಕ್ಷಿಸುತ್ತಾನೆ. ನನ್ನ ಶರೀರವನ್ನು ಇಷ್ಟಪಡುವುದಿಲ್ಲ. ಆಗಾಗ ಹೊಡೆತ ಕೂಡ ತಪ್ಪಿದ್ದಲ್ಲ. ಇದೆಲ್ಲವನ್ನೂ ಸಹಿಸಿಕೊಳ್ಳಬಹುದು. ಆದರೆ ಅವನು ಇನ್ನೊಬ್ಬಳನ್ನು ಇಷ್ಟಪಡುತ್ತಾನಲ್ಲ, ಅದನ್ನು ಮಾತ್ರ ಸಹಿಸಲಾರೆ!' ಎಂದು ಒಬ್ಬಳು ಹೇಳಿಕೊಂಡಿದ್ದಾಳೆ. ಹಾಗಾಗಿ ಸಂಬಂಧಗಳನ್ನು ಪವಿತ್ರ ಅಥವಾ ಅಪವಿತ್ರ ಎಂದು ವಿಶ್ಲೇಷಿಸದೆ ವಾಸ್ತವವಾದಿ ಆಗುವುದು ಅಗತ್ಯವಾಗುತ್ತದೆ.

ಆಧುನಿಕ ಕಾಲದ ಪರಸಂಬಂಧದ ವಿದ್ಯಮಾನವು ಸಾಂಪ್ರದಾಯಿಕ ಪರಸಂಬಂಧಗಳಿಂದ ಸ್ವಲ್ಪ ಭಿನ್ನವಾಗಿದೆ. ಇಲ್ಲಿ ದಾಂಪತ್ಯವು ಎಲ್ಲ ಬಯಕೆಗಳನ್ನೂ ಪೂರೈಸುವ ಮೂಲ ಎಂದು ನಂಬಿದ್ದೇವೆ. ಹಾಗೂ ಇದನ್ನು ಒಬ್ಬರೇ ಸಂಗಾತಿಯು ಪೂರೈಸಲೇಬೇಕು ಎಂದೂ ಅಂದುಕೊಳ್ಳುತ್ತೇವೆ. 'ಕಾರ್ಯೇಷು ದಾಸಿ... ಶಯನೇಷು ವೇಶ್ಯಾ' ಅಗುವಂಥ ಹೆಂಡತಿಯನ್ನು ಈಕಾಲದಲ್ಲೂ ಕೆಲವರು ನಿರೀಕ್ಷಿಸುತ್ತಾರೆ. ಆದರೆ ವಾಸ್ತವ ಏನೆಂದರೆ, ಎಲ್ಲ ಬಯಕೆಗಳನ್ನೂ ಒಬ್ಬರೇ ಪೂರೈಸಲು ಸಾಧ್ಯವಿಲ್ಲ! ಉದಾಹರಣೆಗೆ, ಗೃಹಕೃತ್ಯಗಳನ್ನು ಯಶಸ್ವಿಯಾಗಿ ನೋಡಿಕೊಳ್ಳುವ ಬುದ್ಧಿವಂತೆ ಹೆಂಡತಿಯಾಗಲೀ, ಕುಟುಂಬದ ಆರ್ಥಿಕ ಏಳಿಗೆಗೆ ಹಗಲಿರುಳು ದುಡಿಯುವ ಗಂಡನಾಗಲೀ ಹಾಸಿಗೆಗೆ ಬಸವಳಿದು ಬಂದಾಗ ಕಾಮಕೂಟದಲ್ಲಿ ಅದ್ಭುತ ಸಂಗಾತಿ ಎನ್ನಿಸಿಕೊಳ್ಳಲಿಕ್ಕಿಲ್ಲ. ಹಾಗಾಗಿ ಸಿಗದ ರೋಚಕತೆಗಾಗಿ ಮನಸ್ಸು ಹಾತೊರೆಯುತ್ತದೆ. ಆದರೆ ಇನ್ನೊಂದು ವಾಸ್ತವ ಏನೆಂದರೆ, ದಾಂಪತ್ಯದಲ್ಲಿ ಇರುವ ಭದ್ರತೆಯು ಪರಸಂಬಂಧದಲ್ಲಿ ಇರುವುದಿಲ್ಲ, ಹಾಗೂ ಪರಸಂಬಂಧದಲ್ಲಿ ಇರುವ ರೋಚಕತೆಯು ದಾಂಪತ್ಯದಲ್ಲಿ ಇರುವುದಿಲ್ಲ. ಅತಿ ಆದರ್ಶ ದಾಂಪತ್ಯ ಎಂದುಕೊಂಡವರಲ್ಲೂ ಕೆಲವು ನ್ಯೂನತೆಗಳು ಇರುವುದು ಸಹಜ. 'ಇಲ್ಲಿ ಎಲ್ಲವೂ ಸಿಗಲಾರದು' ಎಂದು ಹೊಂದಾಣಿಕೆ ಅನಿವಾರ್ಯ ಆಗುತ್ತದೆ. ಹೀಗಾಗಿ ಪರಸಂಬಂಧದ ಅವಕಾಶ ದೊರೆತಾಗಲೆಲ್ಲ ಇಬ್ಬಂದಿತನ ಉಂಟಾಗುವುದರಲ್ಲಿ ಆಶ್ಚರ್ಯವಿಲ್ಲ.

ಪರಸಂಬಂಧದಲ್ಲಿ ರೋಚಕತೆ ಇರುವುದಾದರೂ ಹೆಚ್ಚಿನ ಪರಸಂಬಂಧಗಳು ಮನಸ್ಸಿನೊಳಗೆ ಅಡಗಿದ ಬಯಕೆಯ ಲಕ್ಷಣ. ಬಯಕೆ ಎಂದರೇನು? ತಾನು ವಿಶಿಷ್ಟ ವ್ಯಕ್ತಿಯೆಂದು ಗುರುತಿಸಿಕೊಳ್ಳಬೇಕು ಎನ್ನುವ ಬಯಕೆ ಎಲ್ಲರಲ್ಲೂ ಸಹಜವಾಗಿದೆ. ತನ್ನ ಹೊರನೋಟವನ್ನು ಇನ್ನೊಬ್ಬರು ಮೆಚ್ಚಬೇಕು, ತನ್ನ ಭಾವನೆಗಳನ್ನು ಇನ್ನೊಬ್ಬರು ಪುರಸ್ಕರಿಸಬೇಕು, ತನ್ನೊಂದಿಗೆ ಇನ್ನೊಬ್ಬರು ಬೆರೆತು ಆತ್ಮೀಯವಾಗಿ ನಕ್ಕು ನಲಿಯಬೇಕು ಇತ್ಯಾದಿ. ಇದಕ್ಕೆಲ್ಲ ತನ್ನನ್ನು ಇನ್ನೊಬ್ಬರು ಬಯಸಬೇಕು ಹಾಗೂ ತಾನು ಇನ್ನೊಬ್ಬರನ್ನು ಬಯಸಬೇಕು ಎನ್ನುವ ಬಯಕೆಯಲ್ಲಿ ಯಾವುದೇ ಲೈಂಗಿಕ ಬಯಕೆ ಇರಲಿಕ್ಕಿಲ್ಲ. ಇಂಥ ಸಂಗಾತಿಯಲ್ಲದ ಮೂರನೆಯವರು ತನ್ನಲ್ಲಿ ಒಳಗೊಂಡಾಗ ಮಧುರ ಭಾವನೆಗಳು ಉಕ್ಕೇರಿ ಮನಸ್ಸು ಮುದವಾಗುತ್ತದೆ. ವ್ಯಕ್ತಿತ್ವಕ್ಕೆ ಕಳೆ ಕೊಡುತ್ತವೆ. ಅಷ್ಟಲ್ಲದೆ ಆ ವ್ಯಕ್ತಿಯೊಡನೆ ಕಲ್ಪನಾವಿಲಾಸವೂ ಸಾಕಷ್ಟು ಬಯಕೆಯ ಪೂರೈಕೆ ಮಾಡುತ್ತದೆ. ನಾನು ನೋಡಿರುವ ಒಂದು ಜೋಡಿಯಲ್ಲಿ ಹೆಂಡತಿ ಅಪೂರ್ವ ಸೌಂದರ್ಯವತಿ. ಅವರಿಗೆ ಒಬ್ಬ ಸ್ನೇಹಿತನಿದ್ದಾನೆ. ಅವನು ಆಕೆಯ ಸೌಂದರ್ಯವನ್ನು ಹೊಗಳುತ್ತ, 'ನಿನ್ನ ಮದುವೆಯಾಗದಿದ್ದರೆ ನಾನೇ ನಿನ್ನನ್ನು ಮದುವೆಯಾಗಿ ಸುಖ ಸವಿಯುತ್ತಿದ್ದೆ' ಎಂದು ಮೆಚ್ಚುವಾಗ ಗಂಡ ಹೆಂಡತಿ ಇಬ್ಬರೂ ನಗುತ್ತಾರೆ.

ಇದರರ್ಥ ಏನೆಂದರೆ, ಪರಸಂಬಂಧವು ಇಲ್ಲಿಯ ತನಕ ಪರಸ್ಪರರಿಂದ ಮುಚ್ಚಿಟ್ಟಿರುವ ವಿಷಯಗಳನ್ನು ಹೊರತೆಗೆದು ಪರಿಶೀಲಿಸಲು ಅನುವು ಮಾಡಿಕೊಡುತ್ತದೆ. ಮಾತಾಡದೆ ಮೂಲೆಗೊತ್ತಿರುವ ಅಂಶಗಳನ್ನು ಬಯಲಿಗೆ ತರುತ್ತದೆ. ಕಾಮುಕತೆಗೆ ಸಂಬಂಧಪಟ್ಟ ಹಾಗೂ ಕಾಮರಹಿತವಾದ ಅನೇಕ ಅಂಶಗಳನ್ನು ಮುಂಚೂಣಿಯಲ್ಲಿ ಎದುರಿಸಬೇಕಾದ ಅನಿವಾರ್ಯತೆಯನ್ನು ತಂದೊಡ್ಡುತ್ತದೆ. ಸ್ವಂತದ ಬಯಕೆಯ ಬಗೆಗೆ ಮುಕ್ತವಾಗಿ ಮಾತಾಡಲೇಬೇಕಾದ ಪ್ರಸಂಗ ಬಂದಾಗ ಅದಕ್ಕೆ ಅಂಟಿರುವ ರೋಚಕತೆ, ಅಭದ್ರತೆ, ಅನಿಶ್ಚಿತತೆಗಳೂ ಹೊರಬರುವುದು ಅನಿವಾರ್ಯ ಆಗುತ್ತದೆ.